ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಎಚ್. ರಸ್ತೆ, ತುಮಕೂರು – 572 103

ಸಂಖ್ಯೆ: ತುವಿ:ಶೈ.ವಿ:2021–22: 1381 ದಿನಾಂಕ:06.09.2021

# ಅಧಿಸೂಚನೆ

ವಿಷಯ : 2021–22ನೇ ಶೈಕ್ಷಣಿಕ ಸಾಲಿನ ವಿವಿಧ ಸ್ನಾತಕ ಪದವಿಗಳ ಶೈಕ್ಷಣಿಕ ವೇಳಾಪಟ್ಟಿ ಕುರಿತು.

ಉಲ್ಲೇಖ : 1) ಅಧಿಸೂಚನೆ ಸಂಖ್ಯೆ: ತುವಿ:ಶೈವಿ:2021–22:913, ದಿನಾಂಕ:30.07.2021

2) ಶೈಕ್ಷಣಿಕ ವೇಳಾಪಟ್ಟಿ ಸಮಿತಿ ಸಭೆಯ ದಿನಾಂಕ: 02.09.2021

3) ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 04.09.2021

(ಕಂಡಿಕೆ:14 ಪುಟ ಸಂಖ್ಯೆ:03)

* * * * *

ಸೂಚಿತ ವಿಷಯಕ್ಕೆ ಸಂಬಂಧಿಸಿದಂತೆ, 2021–22ನೇ ಶೈಕ್ಷಣಿಕ ಸಾಲಿನ ವಿವಿಧ ಸ್ನಾತಕ ಪದವಿಗಳ ಶೈಕ್ಷಣಿಕ ವೇಳಾಪಟ್ಟಿಯನ್ನು ರಚಿಸುವ ಕುರಿತು ಉಲ್ಲೇಖ (01)ರಲ್ಲಿ ಸಮಿತಿಯನ್ನು ರಚಿಸಲಾಗಿರುತ್ತದೆ. ಇದರಂತೆ, ಉಲ್ಲೇಖ (02) ರಲ್ಲಿ ಸ್ನಾತಕ ಪದವಿ ಕೋರ್ಸ್‌ಗಳ ಶೈಕ್ಷಣಿಕ ವೇಳಾಪಟ್ಟಿ ಸಮಿತಿಯು ಸಭೆ ಸೇರಿ ವೇಳಾಪಟ್ಟಿಯನ್ನು ಸಿದ್ದಪಡಿಸಿ ವರದಿ ನೀಡಿದ ಹಿನ್ನಲೆಯಲ್ಲಿ ಉಲ್ಲೇಖ (03)ರ ಮಾನ್ಯ ಕುಲಪತಿಗಳ ಅನುಮೋದನೆ ಅನ್ವಯ ಈ ಕೆಳಕಂಡಂತೆ ವೇಳಾಪಟ್ಟಿಯನ್ನು ನಿಗಧಿಪಡಿಸಲಾಗಿದೆ.

ಸ್ನಾತಕ ಪದವಿಯ 2021–22 ನೇ ಶೈಕ್ಷಣಿಕ ಸಾಲಿನ ಶೈಕ್ಷಣಿಕ ವೇಳಾಪಟ್ಟಿಯು ಈ ಕೆಳಕಂಡಂತಿದೆ.

## I, III, V, VII & IX ನೇ ಸೆಮಿಸ್ಟರ್

| ಕ್ರಮ ಸಂಖ್ಯೆ | ಶೈಕ್ಷಣಿಕ ವೇಳಾಪಟ್ಟಿ | ದಿನಾಂಕ |
|---|---|---|
| 1 | I, III,V,VII & IX ನೇ ಸೆಮಿಸ್ಟರ್ ತರಗತಿಗಳ ಪ್ರಾರಂಭ | 01.10.2021 |
| 2 | ದಂಡಶುಲ್ಕವಿಲ್ಲದೆ ಪ್ರವೇಶಾತಿ ಕೊನೆಯ ದಿನಾಂಕ | 30.09.2021 |
| 3 | ಪ್ರವೇಶಾತಿ ತಃಖ್ತೆಯನ್ನು ತ್ರಿಪ್ರತಿಯಲ್ಲಿ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಬೇಕಾದ ಕೊನೆಯ ದಿನಾಂಕ | 30.10.2021 |
| 4 | I, III,V,VII & IX ನೇ ಸೆಮಿಸ್ಟರ್ ತರಗತಿಗಳ ಮುಕ್ತಾಯ | 27.01.2022 |
| 5 | ಅಧ್ಯಾಪಕರ ರಜೆ ಪ್ರಾರಂಭ | 28.01.2022 |
| 6 | ಪ್ರಾಯೋಗಿಕ ಪರೀಕ್ಷೆಗಳ ಮುಕ್ತಾಯ | 05.02.2022 |
| 7 | I, III,V,VII & IX ನೇ ಸೆಮಿಸ್ಟರ್ ಸೈದ್ಧಾಂತಿಕ – ಪರೀಕ್ಷೆಗಳು ಮೌಲ್ಯಮಾಪನವೂ ಸೇರಿದಂತೆ | 09.02.2022 ರಿಂದ 26.03.2022 |
| 8 | II, IV,VI,VIII & X ನೇ ಸೆಮಿಸ್ಟರ್ ತರಗತಿಗಳ ಪುನರಾರಂಭ ದಿನಾಂಕ | 28.03.2022 |

## II, IV, VI, VIII & X ನೇ ಸೆಮಿಸ್ಟರ್

| ಕ್ರಮ ಸಂಖ್ಯೆ | ಶೈಕ್ಷಣಿಕ ವೇಳಾಪಟ್ಟಿ | ದಿನಾಂಕ |
|---|---|---|
| 1 | II, IV, VI, VIII & X ನೇ ಸೆಮಿಸ್ಟರ್ ತರಗತಿಗಳ ಪ್ರಾರಂಭ | 28.03.2022 |
| 2 | II, IV, VI, VIII & X ನೇ ಸೆಮಿಸ್ಟರ್ ತರಗತಿಗಳ ಮುಕ್ತಾಯ | 15.07.2022 |
| 3 | ಅಧ್ಯಾಪಕರ ರಜೆ ಪ್ರಾರಂಭ | 16.07.2022 |
| 4 | ಪ್ರಾಯೋಗಿಕ ಪರೀಕ್ಷೆಗಳ ಮುಕ್ತಾಯ | 20.07.2022 |
| 5 | II, IV, VI, VIII & X ನೇ ಸೆಮಿಸ್ಟರ್ ಸೈದ್ಧಾಂತಿಕ ಪರೀಕ್ಷೆಗಳು ಮೌಲ್ಯಮಾಪನವೂ ಸೇರಿದಂತೆ | 25.07.2022 ರಿಂದ 13.09.2022 |
| 6 | 2022–23ನೇ ಶೈಕ್ಷಣಿಕ ವರ್ಷ ಪ್ರಾರಂಭ | 14.09.2022 |

## ಸೂಚನೆಗಳು

1. ವಿಶ್ವವಿದ್ಯಾನಿಲಯದಿಂದ ಸಂಯೋಜನೆ ಪಡೆಯದ ಯಾವುದೇ ಕಾಲೇಜು ವಿದ್ಯಾರ್ಥಿಗಳನ್ನು ಕೋರ್ಸು/ವಿಷಯಗಳಿಗೆ ಪ್ರವೇಶಾತಿ ಮಾಡಿಕೊಳ್ಳತಕ್ಕದ್ದಲ್ಲ ಮತ್ತು ಪಠ್ಯಕ್ರಮ ಹಾಗೂ ವಿನಿಯಮ ಅನುಮೋದನೆಗೊಳ್ಳದ ಕೋರ್ಸು/ವಿಷಯಗಳಿಗೆ ಪ್ರವೇಶಾತಿ ಮಾಡಿಕೊಳ್ಳತಕ್ಕದ್ದಲ್ಲ.

2. ವಿದ್ಯಾರ್ಥಿಗಳ ಪ್ರವೇಶಾತಿಯನ್ನು ವಿನಿಯಮಕ್ಕನುಗುಣವಾಗಿ ಹಾಗೂ ವಿಶ್ವವಿದ್ಯಾನಿಲಯವು ಕಾಲಕಾಲಕ್ಕೆ ಹೊರಡಿಸುವ ಮಾರ್ಗಸೂಚಿಗಳನ್ವಯ ಮಾಡಿಕೊಳ್ಳುವುದು ಸಂಬಂಧಸಿದ ಕಾಲೇಜುಗಳ ಪ್ರಾಂಶುಪಾಲರು ಅಥವಾ ಸಂಸ್ಥೆಯ ಮುಖ್ಯಸ್ಥರ ಪೂರ್ಣ ಜವಾಬ್ದಾರಿಯಾಗಿರುತ್ತದೆ ಮತ್ತು ನಿಯಮಗಳಿಗೆ ವಿರುದ್ಧವಾಗಿ ಮಾಡಿಕೊಳ್ಳಲಾಗುವ ಪ್ರವೇಶಾತಿಯು ಅಮಾನ್ಯವಾಗಿರುತ್ತದೆ.

3. ಹೊರ ರಾಜ್ಯದಲ್ಲಿ ದ್ವಿತೀಯ ಪಿ.ಯು.ಸಿ. ಪೂರೈಸಿರುವ ಎಲ್ಲಾ ವಿದ್ಯಾರ್ಥಿಗಳು ಕಡ್ಡಾಯವಾಗಿ ಅರ್ಹತಾ ಪ್ರಮಾಣ ಪತ್ರಕ್ಕಾಗಿ ನಿಗಧಿತ ನಮೂನೆಯೊಂದಿಗೆ ಅಂಕಪಟ್ಟಿಗಳು, ಕ್ಯುಮ್ಯೂಲೇಟಿವ್ ರೆಕಾರ್ಡ್ ಹಾಗೂ ಇತರೆ ಅವಶ್ಯ ದಾಖಲಾತಿಗಳನ್ನು ಲಗತ್ತಿಸಿ ಅರ್ಜಿ ಸಲ್ಲಿಸುವುದು. ಅರ್ಹತಾ ಪ್ರಮಾಣ ಪತ್ರ ಒದಗಿಸದ ಹೊರ ರಾಜ್ಯದ ವಿದ್ಯಾರ್ಥಿಗಳನ್ನು ಯಾವುದೇ ಕಾರಣಕ್ಕೂ ಪ್ರವೇಶಾತಿ ಮಾಡಿಕೊಳ್ಳತಕ್ಕದ್ದಲ್ಲ.

   ಹೊರ ದೇಶಗಳ ವಿದ್ಯಾರ್ಥಿಗಳನ್ನು ಪ್ರವೇಶಾತಿ ಮಾಡಿಕೊಳ್ಳುವಾಗ ಈ ಕೆಳಕಂಡ ದಾಖಲಾತಿಗಳನ್ನು ಪಡೆಯತಕ್ಕದ್ದು.

   ಎ. ಅರ್ಹತಾ ಪ್ರಮಾಣ ಪತ್ರ

   ಬಿ. ವಿದ್ಯಾರ್ಥಿಯ ವೀಸಾ

   ಸಿ. ಸಕ್ಷಮ ಪಾಧಿಕಾರವು ನೀಡಿರುವ **A.I.D.S.** ಮುಕ್ತ ಪ್ರಮಾಣ ಪತ್ರ

4. ಎರಡು ವರ್ಷಗಳ ಪಿ.ಯು.ಸಿ. ಕೋರ್ಸು ಅಥವಾ ತತ್ಸಮಾನ ಕೋರ್ಸನ್ನು ಪೂರ್ಣಗೊಳಿಸದ (10+2) ಯಾವುದೇ ವಿದ್ಯಾರ್ಥಿಯು ಸ್ನಾತಕ ಪದವಿ ಕೋರ್ಸುಗಳಿಗೆ ಪ್ರವೇಶಾತಿ ಪಡೆಯಲು ಅರ್ಹನಲ್ಲ.

5. ವಿಶ್ವವಿದ್ಯಾನಿಲಯ/ರಾಜ್ಯ ಸರ್ಕಾರವು ನಿಗದಿಪಡಿಸಿರುವ ಪ್ರವೇಶಮಿತಿಗಿಂತ ಹೆಚ್ಚಾಗಿ ಪ್ರವೇಶಾತಿ ಮಾಡಿಕೊಳ್ಳತಕ್ಕದ್ದಲ್ಲ. ಒಂದು ವೇಳೆ ಮಾಡಿಕೊಂಡಲ್ಲಿ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000ರ ಪ್ರಕರಣ 59(18) ರನ್ವಯ ಅಂತಹ ಪ್ರವೇಶಾತಿಯು ಅಮಾನ್ಯವಾಗುತ್ತದೆ.

6. ವಿದ್ಯಾರ್ಥಿಯು ಪ್ರವೇಶ ಪಡೆದಿರುವ ಕೋರ್ಸಿಗೆ ಸಂಬಂಧಿಸಿದ ವಿನಿಯಮ, ಕನಿಷ್ಠ ಹಾಜರಾತಿ ಮತ್ತು ಪರೀಕ್ಷಾ ಸ್ವರೂಪವನ್ನು ಪ್ರತಿ ವರ್ಷ ವಿದ್ಯಾರ್ಥಿಗಳು ಪ್ರವೇಶಾತಿ ಪಡೆಯುವ ಸಂದರ್ಭದಲ್ಲಿ ವಿದ್ಯಾರ್ಥಿಗಳ ಗಮನಕ್ಕೆ ತರುವುದು ಹಾಗೂ ಅನುಸರಣಾ ವರದಿಯನ್ನು ಪ್ರವೇಶ ಪಟ್ಟಿಯೊಂದಿಗೆ ಸಲ್ಲಿಸುವುದು.

7. ವಿಶ್ವವಿದ್ಯಾನಿಲಯದಿಂದ ಪೂರ್ವಾನುಮತಿ ಪಡೆಯದೇ ಯಾವುದೇ ವರ್ಗಾವಣೆ ಪ್ರವೇಶವನ್ನು ಮಾಡಿಕೊಳ್ಳತಕ್ಕದ್ದಲ್ಲ.

8. ಕಾಲೇಜುಗಳು ಆಯಾ ವರ್ಷಗಳಲ್ಲಿ ನಿಗದಿಪಡಿಸುವ ಕೊನೆಯ ದಿನಾಂಕದೊಳಗೆ ಎಲ್ಲಾ ಪ್ರವೇಶಾತಿಗಳನ್ನು ಮಾಡಿಕೊಳತಕ್ಕದ್ದು. ಯಾವುದೇ ಕಾರಣಕ್ಕೂ ವಿಶ್ವವಿದ್ಯಾನಿಲಯವು ನಿಗದಿ ಪಡಿಸಿದ ಕೊನೆಯ ದಿನಾಂಕದ ನಂತರ ಪ್ರವೇಶಾತಿ ಮಾಡಿಕೊಳ್ಳತಕ್ಕದ್ದಲ್ಲ. ಒಂದು ವೇಳೆ ನಿಗದಿಪಡಿಸಿದ ಕೊನೆಯ ದಿನಾಂಕದ ನಂತರ ಪ್ರವೇಶಾತಿ ಮಾಡಿಕೊಂಡಲ್ಲಿ ಅಂತಹ ಪ್ರವೇಶಾತಿಯು ಅಮಾನ್ಯವಾಗುತ್ತದೆ.

9. ಪ್ರಾಂಶುಪಾಲರು/ಸಂಸ್ಥೆಯ ಮುಖ್ಯಸ್ಥರು ಪ್ರವೇಶಾತಿ ಪಟ್ಟಿಯನ್ನು ಶುಲ್ಕ ಪಾವತಿ ರಶೀದಿಯೊಂದಿಗೆ ತ್ರಿಪ್ರತಿಗಳಲ್ಲಿ ದಿನಾಂಕ **13.11.2020**ರೊಳಗೆ ಮಾನ್ಯ ಕುಲಸಚಿವರು (ದ್ವಿಪ್ರತಿ) ಹಾಗೂ ಹಣಕಾಸು ಅಧಿಕಾರಿಗಳು (ಒಂದು ಪ್ರತಿ), ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು ಇವರಿಗೆ ಸಲ್ಲಿಸುವುದು. ಕಾಲೇಜಿನ ಅಧಿಕಾರಿಗಳು ಶೈಕ್ಷಣಿಕ ವಿಭಾಗಕ್ಕೆ ನಿಗದಿತ ದಿನಾಂಕದಂದು ಎಲ್ಲಾ ಅವಶ್ಯ ದಾಖಲಾತಿಗಳನ್ನು ಒದಗಿಸುವುದು. ಪ್ರಾಂಶುಪಾಲರು/ಸಂಸ್ಥೆಯ ಮುಖ್ಯಸ್ಥರು ಪ್ರವೇಶಾತಿ ಪಟ್ಟಿಯನ್ನು ಸಲ್ಲಿಸುವ ಸಂದರ್ಭದಲ್ಲಿ, ಎಲ್ಲಾ ವಿದ್ಯಾರ್ಥಿಗಳ ಪ್ರವೇಶಾತಿಯನ್ನು ವಿಶ್ವವಿದ್ಯಾನಿಲಯದ ವಿನಿಯಮಗಳಿಗನುಗುಣವಾಗಿ ಮಾಡಿಕೊಳ್ಳಲಾಗಿದೆ ಎಂದು ದೃಢೀಕರಿಸುವುದು ಹಾಗೂ ಅನುಸರಣಾ ವರದಿಯನ್ನು ಅಧಿಸೂಚನೆಯ ಪ್ರಕರಣ 06ರನ್ವಯ ಸಲ್ಲಿಸುವುದು.

10. ಹೊರ ರಾಜ್ಯದಲ್ಲಿ ವ್ಯಾಸಂಗ ಮಾಡಿದ ವಿದ್ಯಾರ್ಥಿಗಳ ಪ್ರವೇಶಾತಿ ಪಟ್ಟಿಯನ್ನು ಅರ್ಹತಾ ಪ್ರಮಾಣ ಪತ್ರ ಹಾಗೂ ಇತರೆ ಅಗತ್ಯ ದಾಖಲಾತಿಗಳೊಂದಿಗೆ ಪ್ರತ್ಯೇಕವಾಗಿ ಸಲ್ಲಿಸತಕ್ಕದ್ದು. ಇಂತಹ ವಿದ್ಯಾರ್ಥಿಗಳ ಕ್ರಮಸಂಖ್ಯೆಯನ್ನು ಕರ್ನಾಟಕದೊಳಗೆ ವ್ಯಾಸಂಗ ಮಾಡಿರುವ ವಿದ್ಯಾರ್ಥಿಗಳ ನಂತರ ನಿರಂತರವಾಗಿ ನೀಡತಕ್ಕದ್ದು.

11. ಶೈಕ್ಷಣಿಕ ವೇಳಾಪಟ್ಟಿಯನ್ನು ಎಲ್ಲಾ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳ ಗಮನಕ್ಕೆ ತರುವುದು.

12. ಶೈಕ್ಷಣಿಕ ವೇಳಾಪಟ್ಟಿಯಲ್ಲಿನ ಯಾವುದೇ ದಿನಾಂಕವು ರಜಾ ದಿನವೆಂದು ಘೋಷಿಸಲ್ಪಟ್ಟಲ್ಲಿ ಕಾರ್ಯಕ್ರಮಗಳು ಸದರಿ ದಿನಾಂಕದ ನಂತರದ ಕರ್ತವ್ಯದ ದಿನ ಪ್ರಾರಂಭಗೊಳ್ಳುತ್ತದೆ.

13. ಪ್ರವೇಶಾತಿ ಪಟ್ಟಿಯನ್ನು ತಡವಾಗಿ ಸಲ್ಲಿಸುವುದು ವಿಶ್ವವಿದ್ಯಾನಿಲಯವು ನಿಗದಿಪಡಿಸುವ ದಂಡನೆಗೆ ಒಳಪಟ್ಟಿರುತ್ತದೆ.

ಕರಡು ಪತ್ರವು ಮಾನ್ಯಕುಲಸಚಿವರಿಂದ ಅನುಮೋದಿಸಲ್ಪಟ್ಟಿದೆ.

ಆದೇಶದ ಮೇರೆಗೆ

Mangalahouri M

ಉಪಕುಲಸಚಿವರು

ಉಪಕುಲ ಸಚಿವರು
ಶೈಕ್ಷಣಿಕ ವಿಭಾಗ
ತುಮಕೂರು ವಿಶ್ವವಿದ್ಯಾಲಯ
ತುಮಕೂರು

ಗೆ,

ಪ್ರಾಂಶುಪಾಲರು, ಘಟಕ ಹಾಗೂ ಎಲ್ಲಾ ಸಂಯೋಜಿತ ಸ್ನಾತಕ ಪದವಿ ಕಾಲೇಜುಗಳು,
ತುಮಕೂರು ವಿಶ್ವವಿದ್ಯಾನಿಲಯ ತುಮಕೂರು.

ಪ್ರತಿಗಳು:-

1. ಕುಲಸಚಿವರು (ಮೌಲ್ಯಮಾಪನ) ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು
2. ಕುಲಸಚಿವರು, ಮೈಸೂರು/ಬೆಂಗಳೂರು/ಕರ್ನಾಟಕ/ಕುವೆಂಪು/ಮಂಗಳೂರು/ದಾವಣಗೆರೆ/ಕರ್ನಾಟಕ ಮಹಿಳಾ ವಿಶ್ವವಿದ್ಯಾನಿಲಯ
3. ಹಣಕಾಸು ಅಧಿಕಾರಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು
4. ಡೀನರು, ಕಲಾ ವಿಜ್ಞಾನ, ವಾಣಿಜ್ಯ ಮತ್ತು ಶಿಕ್ಷಣ ನಿಕಾಯ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು
5. ಗ್ರಂಥಪಾಲಕರು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು
6. ನಿರ್ದೇಶಕರು, ವಿದ್ಯಾರ್ಥಿ ಕ್ಷೇಮಾಭಿವೃದ್ಧಿ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು
7. ನಿರ್ದೇಶಕರು, ಕಾಲೇಜು ಅಭಿವೃದ್ಧಿ ಪರಿಷತ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು
8. ಎಲ್ಲಾ ವಿಭಾಗಗಳ ಉಪಕುಲಸಚಿವರು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು
9. ಮುಖ್ಯಸ್ಥರು, ಬಿ.ಎಫ್.ಎ. ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು
10. ಎನ್.ಎಸ್.ಎಸ್. ಕೋ-ಆರ್ಡಿನೇಟರ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು
11. ಸಿಸ್ಟಂ ಅನಾಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು - ವೆಬ್‌ಸೈಟ್‌ನಲ್ಲಿ ಇಂದೇ ಪ್ರಕಟಿಸುವುದು.
12. ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು
13. ಮಾನ್ಯ ಕುಲಸಚಿವರ ಆಪ್ತ ಸಹಾಯಕರು,
14. ಕಛೇರಿ ಪ್ರತಿ.